# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2380 |
| ಉತ್ತರಿಸಬೇಕಾದ ದಿನಾಂಕ | 22.03.2022 |
| ಉತ್ತರಿಸಬೇಕಾದ ಸಚಿವರು | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯ ಬಂಗಾರಪೇಟೆ, ಮಾಲೂರು ಕೋಲಾರ ನಗರಗಳಿಗೆ ಕುಡಿಯುವ ನೀರಿಗಾಗಿ "ಯರಗೋಳ್ ಯೋಜನೆ" ಪ್ರಾರಂಭಿಸಿದ್ದು ಯಾವಾಗ; | ಯರಗೋಳ್ ಯೋಜನೆಯನ್ನು ಎರಡು ಭಾಗಗಳಲ್ಲಿ ಕಾರ್ಯಗತಗೊಳಿಸುತ್ತಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ:<br><br>ಅ) ರಾಜ್ಯ ಸರ್ಕಾರ ಯೋಜನೆ: ಬಂಗಾರಪೇಟೆ ತಾಲ್ಲೂಕಿನ ಯರಗೋಳ್ ಗ್ರಾಮದ ಬಳಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ, ಪೂರಕ ಕಾಮಗಾರಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ದಿನಾಂಕ 22-08-2007 ರಲ್ಲಿ ರೂ.16000.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ ಹಾಗೂ ಮಂಡಳಿಯಿಂದ ದಿನಾಂಕ 16-02-2010 ರಂದು ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಮೆ|| ರಾಮ್ಕಿ ಇನ್ ಫ್ರಾಸ್ಟ್ರಕ್ಚರ್, ಹೈದರಾಬಾದ್ ರವರಿಗೆ ದಿನಾಂಕ 30-11-2010 ರಲ್ಲಿ ಗುತ್ತಿಗೆ ನೀಡಲಾಗಿದ್ದು ಅರಣ್ಯ ಇಲಾಖೆಗೆ ಸೇರಿದ 153.15 ಎಕರೆ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ವಿಳಂಬವಾದ ಕಾರಣ, ಕಾಮಗಾರಿಯನ್ನು ತಡವಾಗಿ ದಿನಾಂಕ 21-03-2013 ರಂದು ಪ್ರಾರಂಭಿಸಲಾಗಿದೆ.<br><br>ಆ) ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆ: ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ನೀರು ಸರಬರಾಜು ಕಾಮಗಾರಿಗಳನ್ನು ಕೈಗೊಳ್ಳಲು ರೂ.7992.80 ಲಕ್ಷಗಳ ಅಂದಾಜು ಪಟ್ಟಿಗೆ ಕೇಂದ್ರ ಸರ್ಕಾರದ ಆದೇಶ ಸಂಖ್ಯೆ ಯು.ಡಿ.ಡಿ 13 ಸಿ.ಎಸ್.ಎಸ್ 2006 ದಿನಾಂಕ 16-6-2007 ರಲ್ಲಿ ಅನೋಮೊದನೆ ನೀಡಲಾಗಿದೆ. ಹಾಗೂ ಮಂಡಳಿಯಿಂದ ದಿನಾಂಕ 10-11-2008 ರಂದು ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಡಿ ಏರು ಕೊಳವೆ ಮಾರ್ಗಗಳು, ವಿತರಣಾ ಕೊಳವೆ ಮಾರ್ಗಗಳು, ಮೇಲ್ಮಟ್ಟದ ಜಲಸಂಗ್ರಹಗಾರಗಳು, ಶುದ್ಧೀಕರಣ ಘಟಕಗಳ ನಿರ್ಮಾಣ, ಪಂಪಿಂಗ್ ಮಿಷಿನರಿ, 11 ಕೆ.ವಿ ವಿದ್ಯುತ್ ವಾಹಕ ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿರುತ್ತದೆ. ಪಂಪಿಂಗ್ ಮಿಷಿನರಿ ಹಾಗೂ 11 ಕೆ.ವಿ ವಿದ್ಯುತ್ ವಾಹಕ ಕಾಮಗಾರಿಗಳನ್ನು ಹೊರತು ಪಡಿಸಿ ಉಳಿಕೆ ಕಾಮಗಾರಿಗಳನ್ನು ಮೆ|| ಇಂಜಿನೀಯರಿಂಗ್ ಪ್ರಾಜೆಕ್ಟ್ (ಇಂಡಿಯಾ) ಲಿಮಿಟೆಡ್, ಹೈದರಾಬಾದ್ ರವರಿಗೆ ದಿನಾಂಕ 19-01-2009 ರಲ್ಲಿ ಗುತ್ತಿಗೆ ನೀಡಲಾಗಿದ್ದು ಕಾಮಗಾರಿಯನ್ನು ದಿನಾಂಕ 10-02-2009 ರಂದು ಪ್ರಾರಂಭಿಸಲಾಗಿದೆ. |

ಆ) ಮೇಲ್ಕಂಡ ಯೋಜನೆಯ ರೂಪುರೇಷೆ, ನೀಲಿ-ನಕ್ಷೆ ಹಾಗೂ ಅಂದಾಜು ವೆಚ್ಚಗಳೆಷ್ಟು; (ವಿವರಗಳನ್ನು ನೀಡುವುದು)

ಮಾರ್ಕಂಡೇಯ ನದಿಗೆ ಅಡ್ಡಲಾಗಿ ಯರಗೋಳ್ ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸುವ ಯೋಜನೆಯಿಂದ ಕೋಲಾರ ಜಿಲ್ಲೆಯ ಕೋಲಾರ ನಗರ, ಮಾಲೂರು ಪಟ್ಟಣ, ಬಂಗಾರಪೇಟೆ ಪಟ್ಟಣ ಮತ್ತು ಮಾರ್ಗಮಧ್ಯದ 45 ಗ್ರಾಮಗಳ ಜನತೆಗೆ ಕುಡಿಯುವ ನೀರು ಒದಗಿಸಲು ಉದ್ದೇಶಿಸಲಾಗಿದೆ. ನೀರು ಸರಬರಾಜು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ನಗರ/ ಪಟ್ಟಣ | ದಿನಂಪ್ರತಿ ತಲಾವಾರು ನೀರಿನ ಪ್ರಮಾಣ (ಲೀಟರ್) | 2023 | | 2039 | |
|---|---|---|---|---|---|
| | | ಜನಸಂಖ್ಯೆ | ಬೇಡಿಕೆ ಎಂ.ಎಲ್.ಡಿ ಗಳಲ್ಲಿ + 15% ಸೋರಿಕೆ | ಜನಸಂಖ್ಯೆ | ಬೇಡಿಕೆ ಎಂ.ಎಲ್.ಡಿ ಗಳಲ್ಲಿ + 15% ಸೋರಿಕೆ |
| ಕೋಲಾರ | 100 | 180798 | 18.49 | 204147 | 23.47 |
| ಬಂಗಾರ ಪೇಟೆ | 70 | 54901 | 4.42 | 89703 | 5.81 |
| ಮಾಲೂರು | 70 | 39441 | 3.17 | 50075 | 4.04 |
| ಮಾರ್ಗ ಮಧ್ಯದ 45 ಗ್ರಾಮಗಳು | 40 | 42254 | 1.94 | 73751 | 2.47 |
| | ಒಟ್ಟು | 297392 | 28.02 | 397675 | 35.59 |

ಯೋಜನೆಯ ನೀಲಿ ನಕ್ಷೆ ಲಗತ್ತಿಸಲಾಗಿದೆ.

ಅ) ರಾಜ್ಯ ಸರ್ಕಾರ ಯೋಜನೆ ಕಾಮಗಾರಿಗಳು: 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ, ಪೂರಕ ಕಾಮಗಾರಿಗಳ ಮೂಲ ಅಂದಾಜು ಮೊತ್ತ ರೂ.16000.00 ಲಕ್ಷಗಳು ಹಾಗೂ ಪರಿಷ್ಕೃತ ಅಂದಾಜು ಮೊತ್ತವು ರೂ.18600.00 ಲಕ್ಷಗಳು ಆಗಿದ್ದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ದಿನಾಂಕ 06-11-2019 ರಲ್ಲಿ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಬಾಕಿ ಇರುತ್ತದೆ.

1) 500 MCFT Concrete Dam,

- Length - 414.04 Mtr
- Hieght – 41.30 Mtr
- Bottom Width – 40.50 Mtr

2) 813 mm dia MS Rising main – 9.5 Kms

3) Jackwell cum pump house 16.2 m x 12 m

ಮೇಲ್ಕಂಡ ಕಾಮಗಾರಿಗಳನ್ನು 30-09-2020 ರಂದು ಪೂರ್ಣಗೊಳಿಸಲಾಗಿದೆ.

ಆ) ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆ ಕಾಮಗಾರಿಗಳು: ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯ ಅಂದಾಜು ಮೊತ್ತ ರೂ.7992.80 ಲಕ್ಷಗಳು ಹಾಗೂ ಪರಿಷ್ಕೃತ ಅಂದಾಜು ಮೊತ್ತ ರೂ.12776.40 ಲಕ್ಷಗಳಿಗೆ ದಿನಾಂಕ 16.01.2021 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಸದರಿ ಅಂದಾಜು ಪಟ್ಟಿಯಲ್ಲಿ ಅನುವು ಮಾಡಿರುವ ಕಾಮಗಾರಿಗಳು:

| ಕ್ರ. ಸಂ | ಕಾಮಗಾರಿಯ ವಿವರಗಳು | ಅಂದಾಜು ಪಟ್ಟಿಯ ಅನುಸಾರ | ಕಾರ್ಯಗತ ಆಗಿರುವುದು | ಉಳಿಕೆ ಕಾಮಗಾರಿ | ಷರಾ |
|---|---|---|---|---|---|
| 1 | M.S ಹಾಗೂ D.I ಕೊಳವೆ ಮಾರ್ಗ | 66.41 ಕಿ.ಮೀ | 64.11 ಕಿ.ಮೀ | 2.3 ಕಿ.ಮೀ | ಕಾವಗಾರಿ ಪ್ರಗತಿಯಲ್ಲಿರುತ್ತದೆ. |
| 2 | P.V.C ವಿತರಣಾ ಕೊಳವೆ ಮಾರ್ಗ | 71 ಕಿ.ಮೀ | 61.1 ಕಿ.ಮೀ. | 9.9 ಕಿ.ಮೀ. | ಕಾವಗಾರಿ ಪ್ರಗತಿಯಲ್ಲಿರುತ್ತದೆ. |
| 3 | ಮೇಲ್ಮಟ್ಟದ ಜಲಸಂಗ್ರಹಾಗಾರಗಳು. | ಕೋಲಾರ 7<br>ಬಂಗಾರ ಪೇಟೆ 2<br>ಮಾಲೂರು 1<br>**ಒಟ್ಟು 10** | ಕೋಲಾರ 3<br>ಬಂಗಾರ ಪೇಟೆ 2<br>ಮಾಲೂರು 1<br>**ಒಟ್ಟು 5** | 4 | ಕೋಲಾರ ನಗರದಲ್ಲಿ 4 ಮೇಲ್ಮಟ್ಟದ ಜಲಸಂಗ್ರಹಾರಗಳು ನಿರ್ಮಿಸಲು ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. |
| 4 | ಜಲ ಶುದ್ಧೀಕರಣ ಘಟಕ | ಕೋಲಾರ 1<br>ಬಂಗಾರ ಪೇಟೆ 1<br>**ಒಟ್ಟು 2** | 2 | 0 | ಶೇ.90% ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |
| 5 | Pumping machineries | ಯರ್ ಗೋಳ್ 3<br>ಬಂಗಾರ ಪೇಟೆ 7<br>ಕೊಲಾರ್ 3<br>**ಒಟ್ಟು 13** | 13 | 0 | ಶೇ.95% ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |
| 6 | 11 KV ವಿದ್ಯುತ್ ಮಾರ್ಗ | 70.48 ಕಿ.ಮೀ | 34 ಕಿ.ಮೀ | 36.48 ಕಿ.ಮೀ | ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

- ಕೋಲಾರ ನಗರದಲ್ಲಿನ 4 ಮೇಲ್ಮಟ್ಟ ಜಲಸಂಗ್ರಹಾಗಾರಗಳನ್ನು ಹಾಗೂ 11.70 ಕಿ.ಮಿ ವಿತರಣಾ ಕೊಳವೆ ಮಾರ್ಗ ಹೊರತು ಪಡಿಸಿ, ಶೇ.80% ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

- ಕೋಲಾರ ನಗರದಲ್ಲಿ 4 ಸಂಖ್ಯೆ ಮೇಲ್ಮಟ್ಟ ಜಲಸಂಗ್ರಹಾಗಾರಗಳನ್ನು ಹಾಗೂ 11.70 ಕಿ.ಮಿ ವಿತರಣಾ ಕೊಳವೆ ಮಾರ್ಗ ಹಾಗೂ ಪೂರಕ ಕಾಮಗಾರಿಗಳಿಗೆ ಆರ್ಥಿಕ ಇಲಾಖೆಯಿಂದ IEBR ಸಾಲ ಮಂಜೂರಾದ ನಂತರ ಟೆಂಡರ್ ಆಹ್ವಾನಿಸಲಾಗುವುದು.

- ಸದರಿ ಎರಡೂ ಯೋಜನೆಗಳಿಗೆ ಒಟ್ಟು ರೂ. 245.90 ಕೋಟಿ ವೆಚ್ಚ ಆಗಿರುತ್ತದೆ.

| | | |
|---|---|---|
| ಇ) | ಸದರಿ ಯೋಜನೆಯಲ್ಲಿ ಕಳಪೆ ಕಾಮಗಾರಿ, ಹಣ ದುರುಪಯೋಗ, ಅವೈಜ್ಞಾನಿಕ ನಿರ್ವಹಣೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • "ಯರಗೋಳ್ ಯೋಜನೆ" ಕಾಮಗಾರಿ ಅನುಷ್ಠಾನ ಸಮಯದಲ್ಲಿ ಕಾಮಗಾರಿಗಳಿಗೆ ಬಳಸಲಾದ ಈ ಕೆಳಕಂಡ ಹಾಗೂ ಇತರೆ ಸಾಮಗ್ರಿಗಳನ್ನು 3ನೇ ಏಜೆನ್ಸಿ ಮೂಲಕ ತಪಾಸಣೆ ಮಾಡಿ ನಿಗದಿತ ಮಾನದಂಡಗಳು ಅಳವಡಿಕೆಯಾದ ನಂತರ ಬಳಕೆ ಮಾಡಲಾಗಿರುತ್ತದೆ.<br>a) ಸಿಮೆಂಟ್,<br>b) ಸ್ಟೀಲ್,<br>c) M.S, D.I, P.V.C, ಕೊಳವೆಗಳು,<br>d) Valves,<br>e) Pumping Machineries & Electrical equipments.<br><br>ಸಿವಿಲ್ ಕಾಮಗಾರಿಗಳನ್ನು ನಿರ್ಮಾಣ ಹಂತದಲ್ಲಿಯೇ 3ನೇ ತಪಾಸಣೆ ಏಜೆನ್ಸಿಯ ಉಸ್ತುವಾರಿಯಲ್ಲಿ ಕೈಗೊಳ್ಳಲಾಗಿರುತ್ತದೆ. ಅಣೆಕಟ್ಟೆಯ ನಿರ್ಮಾಣ ಕಾಮಗಾರಿಯನ್ನು ನುರಿತ ತಂತ್ರಜ್ಞರ ಸಲಹೆ (National Institute of Rock Mechanics ಮತ್ತು ಇತರೆ), Project Management Consultant ರವರಿಂದ ಕಾಮಗಾರಿಯ ಗುಣಮಟ್ಟವನ್ನು ನಿಯಮಾನುಸಾರ ಪರೀಕ್ಷೆ ಮಾಡಲಾಗಿರುತ್ತದೆ.ಯೋಜನೆಯ ಕಾಮಗಾರಿಗಳನ್ನು Tender Specifications ಅನುಸಾರ ವೈಜ್ಞಾನಿಕವಾಗಿ ಕಾರ್ಯಗತಗೊಳಿಸಲಾಗಿದ್ದು, ಮತ್ತು ಕಾಮಗಾರಿಗಳು ಪ್ರಗತಿಯಲ್ಲಿರುವಾಗ, ವಿವಿಧ ಹಂತಗಳಲ್ಲಿ, ಮಂಡಳಿಯ ಹಿರಿಯ ಅಧಿಕಾರಿಗಳು ಹಾಗೂ 3 ನೇ ಏಜೆನ್ಸಿ, ತಪಾಸಣೆ ಮಾಡಿದ್ದು, ಕಳಪೆ ಕಾಮಗಾರಿಯಾಗಲಿ ಅಥವಾ ಹಣ ದುರುಪಯೋಗ ಆಗಿರುವುದಿಲ್ಲ. |
| ಈ) | ಬಂದಿದ್ದಲ್ಲಿ, ಮೇಲ್ಕಂಡ ಗುತ್ತಿಗೆದಾರರ ಹಾಗೂ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; | ಕಳಪೆ ಕಾಮಗಾರಿ ಹಾಗೂ ಹಣ ದುರುಪಯೋಗ ಆಗದಿರುವುದರಿಂದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಮೇಯ ಬರುವುದಿಲ್ಲ. ಗುತ್ತಿಗೆದಾರರು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ವಿಳಂಬ ಮಾಡಿದ ಪ್ರಯುಕ್ತ, ಟೆಂಡರ್ ಕರಾರಿನಂತೆ ಗುತ್ತಿಗೆದಾರರಿಗೆ ರೂ. 431.1 (ರೂ. 215.27 ಲಕ್ಷ + ರೂ.209.26 ಲಕ್ಷ + ರೂ.6.57 ಲಕ್ಷ) ಲಕ್ಷಗಳ ದಂಡವನ್ನು ವಿಧಿಸಲಾಗಿರುತ್ತದೆ. |
| ಉ) | ಸದರಿ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಸ್ಪಷ್ಟವಾದ ಮಾಹಿತಿ ನೀಡುವುದು) | ಅ) ರಾಜ್ಯ ಸರ್ಕಾರ ಯೋಜನೆ ಕಾಮಗಾರಿಗಳು: 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳನ್ನು ದಿನಾಂಕ: 30-09-2020 ರಂದು ಪೂರ್ಣಗೊಂಡಿದೆ. ನವೆಂಬರ್ 2021 ರಲ್ಲಿ ಆದ ಉತ್ತಮ ಮಳೆಯಿಂದಾಗಿ ಅಣೆಕಟ್ಟೆಯ ವಿನ್ಯಾಸ ಶೇಖರಣಾ ಸಾಮರ್ಥ್ಯಕ್ಕೆ ಶೇ.77 ರಷ್ಟು ಅಂದರೆ 385 ಎಂ.ಸಿ.ಎಫ್.ಟಿ ನೀರು ಅಣೆಕಟ್ಟೆಯಲ್ಲಿ ಸಂಗ್ರಹವಾಗಿರುತ್ತದೆ.<br><br>ಆ) ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆ ಕಾಮಗಾರಿಗಳು: ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆ ಏರು ಕೊಳವೆ ಮಾರ್ಗಗಳು, ವಿತರಣಾ ಕೊಳವೆ ಮಾರ್ಗಗಳು, ಮೇಲ್ಮಟ್ಟದ ಜಲಸಂಗ್ರಹಗಾರಗಳು, ಶುದ್ಧೀಕರಣ ಘಟಕಗಳು, ಪಂಪಿಂಗ್ ಮಿಷಿನರಿ ಹಾಗೂ ಪೂರಕ ಕಾಮಗಾರಿಗಳಿಗೆ ಸರ್ಕಾರದಿಂದ ಅನುಮೋದನೆಗೊಂಡಿರುವ ರೂ. 12776.40 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯ ಆರ್ಥಿಕ |

| | | |
|---|---|---|
| | | ಮಾದರಿಯಂತೆ, ಮೂಲ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿಯಾದ ಮೊತ್ತ ಅಂದರೆ ರೂ. 4783.60 ಲಕ್ಷಗಳನ್ನು IEBR ಸಾಲ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. IEBR ಸಾಲ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ದಿನಾಂಕ 07-09-2021 ರಂದು ಸಲ್ಲಿಸಲಾಗಿದೆ. ಸದರಿ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ಈಗಾಗಲೇ ಟೆಂಡರ್ ಕರೆದಿರುವ ಕಾಮಗಾರಿಗಳು ಶೇ.80 ರಷ್ಟು ಪೂರ್ಣಗೊಂಡಿದ್ದು, IEBR ಸಾಲ ದೊರತ ನಂತರ 3 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಎಂದು ಮಂಡಳಿ ತಿಳಿಸಿದ್ದು, ಕೂಡಲೇ ಈ ಬಗ್ಗೆ ಕ್ರಮ ವಹಿಸಲಾಗುವುದು. |

ಸಂಖ್ಯೆ: ನಅಇ 83 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು